157ನಿ೬ = (116)
UKR
050126

## ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಮಧು ಜಿ ಮಾದೇಗೌಡ ಇವರು ನಿಯಮ 72ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

***

**ವಿಷಯ:** ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ದಿನಾಂಕ:31.10.2017ರ ಪೂರ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲದ ಕಾರಣಕ್ಕೆ ಅನುಮೋದನೆಯಾಗದೇ ಇರುವ ಹಾಗೂ ಎಲ್ಲಾ ದಾಖಲಾತಿಗಳು ಸರಿಯಿದ್ದರೂ ಅನುಮೋದನೆ ಆಗದೇ ಇರುವ ನೀರುಗಂಟಿ, ಸ್ವಚ್ಛತಗಾರರು, ಅಟೆಂಡರ್, ಕರವಸೂಲಿಗಾರರು, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಅನುಮೋದನೆ ನೀಡಲು ಮಂಡ್ಯ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವಿನಾಕಾರಣ, ಉದ್ದೇಶಪೂರ್ವಕವಾಗಿ ವಿಳಂಬ ಮಾಡಲಾಗುತ್ತಿದೆ ಎನ್ನುವ ಆರೋಪಗಳು ಬಲವಾಗಿ ಕೇಳಿಬರುತ್ತಿದೆ. ತಾಲ್ಲೂಕು ಪಂಚಾಯಿತ್ ಮತ್ತು ಜಿಲ್ಲಾ ಪಂಚಾಯತ್ ಅಧಿಕಾರಿಗಳ ಧೋರಣೆಯಿಂದ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಅವಶ್ಯವಾಗಿ ದೊರೆಯಬೇಕಾದ ಸೌಲಭ್ಯಗಳು ಸಿಗದೇ ವಂಚಿತರಾಗುತ್ತಿರುವ ಬಗ್ಗೆ.

******

**ಉತ್ತರ:** - ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆದೇಶ ಸಂಖ್ಯೆ:ಕೆಪಿಆರ್‌ಸಿ-ಜಿಪಿಎ/450/2023, ದಿನಾಂಕ:18.11.2023 ರನ್ವಯ ದಿನಾಂಕ: 31.10.2017 ರ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದು, ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲದ ಕಾರಣಕ್ಕೆ ಅನುಮೋದನೆಗಾಗಿ ಬಾಕಿ ಇದ್ದ 8586 ವಾಟರ್ ಆಪರೇಟರ್‌ಗಳು, 794 ಅಟೆಂಡೆಂಟ್‌ಗಳು ಹಾಗೂ 1790 ಕ್ಲೀನರ್ಸ್‌ಗಳು ಸೇರಿದಂತೆ ಒಟ್ಟು 11170 ಗ್ರಾಮ ಪಂಚಾಯಿತಿ ನೌಕರರುಗಳಿಗೆ ಕನಿಷ್ಟ ವಿದ್ಯಾರ್ಹತೆಯನ್ನು ಹೊರತುಪಡಿಸಿ ( ಕೈಬಿಟ್ಟು), ಗ್ರಾಮ ಪಂಚಾಯಿತಿ ಸಭಾ ನಡವಳಿ, ವೇತನ ಪಾವತಿ, ಹಾಜರಾತಿ ಆಧಾರದ ಮೇಲೆ ಒಂದು ಬಾರಿಗೆ ಜಿಲ್ಲಾ ಪಂಚಾಯಿತಿಯಿಂದ ಘಟನೋತ್ತರವಾಗಿ ಅನುಮೋದನೆ ನೀಡಲು ಅವಕಾಶ ನೀಡಿ ಆದೇಶಿಸಲಾಗಿದೆ.

ಈ ಆದೇಶದನ್ವಯ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಕನಿಷ್ಟ ವಿದ್ಯಾರ್ಹತೆ ಹೊಂದಿಲ್ಲದ ಕಾರಣದಿಂದಾಗಿ ಅನುಮೋದನೆಯಾಗಿರದ 550 ವಾಟರ್ ಆಪರೇಟರ್‌ಗಳು 136 ಕ್ಲೀನರ್ಸ್ ಹಾಗೂ 41 ಅಟೆಂಡೆಂಟ್‌ಗಳು ಸೇರಿದಂತೆ ಒಟ್ಟು 727 ಸಿಬ್ಬಂದಿಗಳಿಗೆ ಘಟನೋತ್ತರವಾಗಿ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ನೀಡಲು ಅವಕಾಶವಿರುತ್ತದೆ. ಈ ಪೈಕಿ ಮಂಡ್ಯ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ನೀಡಿರುವ ಮತ್ತು ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಮಾಹಿತಿಯು ಈ ಕೆಳಕಂಡಂತಿದೆ:

| ಹುದ್ದೆ | ಕನಿಷ್ಠ ವಿದ್ಯಾರ್ಹತೆಯ ಕಾರಣಕ್ಕೆ ಅನುಮೋದನೆಗೆ ಬಾಕಿ ಇದ್ದ ಸಿಬ್ಬಂದಿಗಳ ಸಂಖ್ಯೆ | ಆಯುಕ್ತಾಲಯದ ದಿನಾಂಕ:18.11.2023ರ ಆದೇಶದ ನಂತರದಲ್ಲಿ ಅನುಮೋದನೆ ನೀಡಿರುವ ಸಿಬ್ಬಂದಿಗಳ ಸಂಖ್ಯೆ | ಪ್ರಸ್ತುತ ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| ವಾಟರ್ ಆಪರೇಟರ್ | 550 | 0 | 550 |
| ಅಟೆಂಡೆಂಟ್ | 41 | 0 | 41 |
| ಕ್ಲೀನರ್ಸ್ | 136 | 0 | 136 |
| ಒಟ್ಟು | 727 | 0 | 727 |

....2

ಈ ಆದೇಶದನ್ವಯ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಯಿತಿಗಳಿಗೆ ನಿಗಧಿಪಡಿಸಲಾಗಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಹಾಗೂ ಆದೇಶ ನೀಡಿದ ನಂತರದಲ್ಲಿ ಜಿಲ್ಲಾ ಪಂಚಾಯಿತಿಗಳಿಂದ ಅನುಮೋದನೆ ನೀಡಿರುವ ಮತ್ತು ಪ್ರಸ್ತುತ ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಮಾಹಿತಿಯು ಈ ಕಳಕಂಡಂತಿದೆ:

| **ಹುದ್ದೆ** | **ಕನಿಷ್ಠ ವಿದ್ಯಾರ್ಹತೆಯ ಕಾರಣಕ್ಕೆ ಅನುಮೋದನೆಗೆ ಬಾಕಿ ಇದ್ದ ಸಿಬ್ಬಂದಿಗಳ ಸಂಖ್ಯೆ** | **ಆಯುಕ್ತಾಲಯದ ದಿನಾಂಕ:18.11.2023ರ ಆದೇಶದ ನಂತರದಲ್ಲಿ ಅನುಮೋದನೆ ನೀಡಿರುವ ಸಿಬ್ಬಂದಿಗಳ ಸಂಖ್ಯೆ** | **ಪ್ರಸ್ತುತ ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ** |
|---|---|---|---|
| ಒಟ್ಟು | 11170 | 7250 | 3920 |

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಆದೇಶ ಸಂಖ್ಯೆ:ಕೆಪಿಆರ್‌ಸಿ-ಜಿಪಿಎ/450/2023 ದಿನಾಂಕ:16-03-2024 ರನ್ವಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ದಿನಾಂಕ:31-10-2017 ರ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದು ಅನುಮೋದನೆಗೆ ಬಾಕಿ ಇದ್ದ 704 ಕರವಸೂಲಿಗಾರರು, 775 ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳು, 4373 ವಾಟರ್ ಆಪರೇಟರ್‌ಗಳು, 1141 ಕ್ಲೀನರ್ಸ್, 522 ಅಟೆಂಡೆಂಟ್‌ಗಳು ಸೇರಿದಂತೆ ಒಟ್ಟು 7515 ಸಿಬ್ಬಂದಿಗಳಿಗೆ ಕನಿಷ್ಠ ವಿದ್ಯಾರ್ಹತೆ, ಗ್ರಾಮ ಪಂಚಾಯಿತಿ ಸಭಾ ನಡವಳಿ, ವೇತನ ಪಾವತಿ, ಹಾಜರಾತಿ ಆಧಾರದ ಮೇಲೆ ಒಂದು ಬಾರಿಗೆ ಜಿಲ್ಲಾ ಪಂಚಾಯಿತಿಯಿಂದ ಘಟನೋತ್ತರವಾಗಿ ಅನುಮೋದನೆ ನೀಡಲು ಆದೇಶಿಸಲಾಗಿರುತ್ತದೆ.

ಈ ಆದೇಶದನ್ವಯ ಮಂಡ್ಯ ಜಿಲ್ಲೆಯಲ್ಲಿ ಎಲ್ಲಾ ದಾಖಲಾತಿಗಳು ಸರಿ ಇದ್ದು, ಅನುಮೋದನೆಗೆ ಬಾಕಿ ಇದ್ದ 40 ಕರ ವಸೂಲಿಗಾರರು, 40 ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳು, 113 ವಾಟರ್ ಆಪರೇಟರ್‌ಗಳು, 13 ಕ್ಲೀನರ್ಸ್, 10 ಅಟೆಂಡೆಂಟ್‌ಗಳು ಸೇರಿದಂತೆ ಒಟ್ಟು 216 ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಅನುಮೋದನೆಗೆ ಅವಕಾಶ ನೀಡಲಾಗಿರುತ್ತದೆ. ಈ ಪೈಕಿ ಮಂಡ್ಯ ಜಿಲ್ಲಾ ಪಂಚಾಯಿತಿಯಿಂದ ಈ ಆದೇಶದನ್ವಯ 216 ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಅನುಮೋದನೆ ನೀಡುವುದು ಬಾಕಿಯಿರುತ್ತದೆ.

ಮೇಲಿನ ಆದೇಶದನ್ವಯ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ನಿಗಧಿಪಡಿಸಲಾಗಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಹಾಗೂ ಆದೇಶದ ನಂತರದಲ್ಲಿ ಜಿಲ್ಲಾ ಪಂಚಾಯಿತಿಗಳಿಂದ ಅನುಮೋದನೆ ನೀಡಿರುವ ಮತ್ತು ಪ್ರಸ್ತುತ ಅನುಮೋದನೆಗೆ ಬಾಕಿ ಇರುವ ಮಾಹಿತಿಯು ಈ ಕೆಳಕಂಡಂತಿದೆ:

| **ಹುದ್ದೆ** | **ಎಲ್ಲಾ ದಾಖಲೆಗಳು ಸರಿಯಾಗಿದ್ದು, ಅನುಮೋದನೆಗೆ ಬಾಕಿ ಇದ್ದ ಸಿಬ್ಬಂದಿಗಳ ಸಂಖ್ಯೆ** | **ಆಯುಕ್ತಾಲಯದ ದಿನಾಂಕ:16.03.2024 ರ ಆದೇಶದ ನಂತರದಲ್ಲಿ ಅನುಮೋದನೆ ನೀಡಿರುವ ಸಿಬ್ಬಂದಿಗಳ ಸಂಖ್ಯೆ** | **ಪ್ರಸ್ತುತ ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ** |
|---|---|---|---|
| ಒಟ್ಟು | 7515 | 3577 | 3938 |

ದಿನಾಂಕ:16-03-2024ರ ಆದೇಶದನ್ವಯ ಅನುಮೋದನೆ ನೀಡಲಾದ ಮತ್ತು ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಿದೆ.

ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಅನುಮೋದನೆಗೆ ಸಂಬಂಧಿಸಿದಂತೆ, ಮಂಡ್ಯ ಜಿಲ್ಲಾ ಪಂಚಾಯಿತಿ ಹಂತದಲ್ಲಿ ದಿನಾಂಕ:26.06.2025 ಮತ್ತು 31.07.2025ರಂದು ದಾಖಲಾತಿಗಳನ್ನು ಪರಿಶೀಲಿಸಲು ಎರಡು ಬಾರಿ ಅವಕಾಶ ನೀಡಿ, ಬಾಕಿ ಇರುವ ಪ್ರಸ್ತಾವನೆಗಳನ್ನು ತಾಲ್ಲೂಕು ಮಟ್ಟದ ಸಮಿತಿ ಸಭೆಯಲ್ಲಿ ಪರಿಶೀಲಿಸಿದ ನಂತರ ಜಿಲ್ಲಾ ಮಟ್ಟದ ಸಮಿತಿ ಸಭೆಯಲ್ಲಿ ಪರಿಶೀಲಿಸಲು ಸಭೆಯನ್ನು ಕರೆಯಲಾಗಿರುತ್ತದೆ, ಪ್ರಸ್ತುತ ಸಿಬ್ಬಂದಿಗಳ ಅನುಮೋದನೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

...3

ಗ್ರಾಮ ಪಂಚಾಯಿತಿಗಳಲ್ಲಿ ದಿನಾಂಕ:31-10-2017ರ ಪೂರ್ವದಲ್ಲಿ ನೇಮಕಗೊಂಡು ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ಆಗಿಲ್ಲದ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಸೇವಾ ಭದ್ರತೆಯನ್ನು ನೀಡುವ ಸಲುವಾಗಿ ಸರ್ಕಾರದಿಂದ ಒಂದು ಬಾರಿಗೆ ಘಟನೋತ್ತರವಾಗಿ ಅನುಮೋದನೆ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ದಿನಾಂಕ:18-11-2023 ಮತ್ತು ದಿನಾಂಕ:16-03-2024ರ ಆದೇಶಗಳನ್ವಯ ಕ್ರಮ ವಹಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಿಂದ ನಿರ್ದೇಶನ ನೀಡಲು ದಿನಾಂಕ:25-11-2024 ರಲ್ಲಿ ಅರೆ ಸರ್ಕಾರಿ ಪತ್ರವನ್ನು ಹೊರಡಿಸಲಾಗಿರುತ್ತದೆ.

**ಸಂಖ್ಯೆ:**RDPR 1044 GPA 2025

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ- 1

| ನಮೂನೆ-1 | | | | | |
|---|---|---|---|---|---|
| ದಿನಾಂಕ:31-10-2017 ಕ್ಕಿಂತ ಹಿಂದೆ ನೇಮಕಗೊಂಡು ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿಲ್ಲದೇ ಅನುಮೋದನೆಯಾಗದೇ ಇರುವ ಸಿಬ್ಬಂದಿಗಳಿಗೆ ಅನುಮೋದನೆಯನ್ನು ನೀಡಿರುವ ಸಿಬ್ಬಂದಿಗಳ ಸಂಖ್ಯೆ (20.11.2025 ಅಂತ್ಯಕ್ಕೆ) | | | | | |
| ಕ್ರ. ಸಂ. | ಜಿಲ್ಲೆಯ ಹೆಸರು | ಕನಿಷ್ಠ ವಿದ್ಯಾರ್ಹತೆ ಇಲ್ಲದೆ ಅನುಮೋದನೆಯಾಗದೇ ಇರುವ ಸಿಬ್ಬಂದಿಗಳ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿಲ್ಲದೇ ಅನುಮೋದನೆಯಾಗದೇ ಇರುವ ಸಿಬ್ಬಂದಿಗಳಿಗೆ ಅನುಮೋದನೆಯನ್ನು ನೀಡಿರುವ ಸಂಖ್ಯೆ | ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ | ಷರಾ |
| 1 | ಬೆಂಗಳೂರು ನಗರ | 378 | 235 | 143 | 143 ಸಿಬ್ಬಂದಿಗಳು ಮಂಜೂರಾಗದ ಹುದ್ದೆಗಳಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| 2 | ಬೆಂಗಳೂರು ಗ್ರಾಮಾಂತರ | 452 | 346 | 106 | ಕೆಲವು ಸಿಬ್ಬಂದಿ ನಿವೃತ್ತಿ ಹಾಗೂ ಮರಣ ಹೊಂದಿದ್ದು, ಕಾರ್ಯನಿರ್ವಾಹಕ ಅಧಿಕಾರಿಗಳು ಯಾವುದೇ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲವೆಂದು ದೃಢೀಕರಣ ನೀಡಿರುತ್ತಾರೆ |
| 3 | ಚಿಕ್ಕಬಳ್ಳಾಪುರ | 785 | 622 | 163 | |
| 4 | ಚಿತ್ರದುರ್ಗ | 450 | 412 | 38 | - |
| 5 | ದಾವಣಗೆರೆ | 193 | 137 | 56 | 35 ಮೂಲ ದಾಖಲೆಗಳು ಸರಿ ಇರುವುದಿಲ್ಲ. 20 ವಯೋಮಿತಿ ಮೀರಿರುತ್ತವೆ. ಜಾಡಮಾಲಿ 1 ಒಂದು ಹುದ್ದೆಗೆ 2 ಪ್ರಸ್ತಾವನೆ ಸಲ್ಲಿಸಿದ್ದು ಹಿಂತಿರುಗಿಸಲಾಗಿದೆ |
| 6 | ಕೋಲಾರ | 1017 | 504 | 513 | ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಅನುಮೋದನೆಗೆ ಯಾವುದೇ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ. |
| 7 | ಬೆಂಗಳೂರು ದಕ್ಷಿಣ (ರಾಮನಗರ) | 251 | 0 | 251 | ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲದ 718 ಸಿಬ್ಬಂದಿಗಳು ಬಾಕಿ ಇದ್ದು, 251 ಸಿಬ್ಬಂದಿಗಳಿಗೆ ಅನುಮೋದನೆ ನೀಡಲು 1.7.2023 ರಲ್ಲಿ ಆಯುಕ್ತಾಲಯದಿಂದ ಆದೇಶಿಸಲಾಗಿದೆ. ಆದ್ದರಿಂದ ಆಯುಕ್ತಾಲಯದಿಂದ ನಿಗಧಿಪಡಿಸಿರುವ ಸಂಖ್ಯೆಯನ್ನು ಸರಿಪಡಿಸಿ ಕೊಡಲು ದಿ:19.7.25 ರಲ್ಲಿ ಕೋರಲಾಗಿದೆ. 580 ಸಿಬ್ಬಂದಿಗಳ ಅನುಮೋದನೆ ಸಂಬಂಧ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ. ಈ ಪೈಕಿ 527 ಸಿಬ್ಬಂದಿಗಳ ದಾಖಲಾತಿಗಳು ಸರಿ ಇದ್ದು, ಉಳಿದ ಸಿಬ್ಬಂದಿಗಳ ದಾಖಲಾತಿಗಳನ್ನು ಮರು ಮಂಡಿಸಲು ತಿಳಿಸಲಾಗಿದ್ದು, ಆಯುಕ್ತಾಲಯದಿಂದ ನಿಗಧಿಪಡಿಸಿರುವ ಸಂಖ್ಯೆಯನ್ನು ಸರಿಪಡಿಸಲು ಕೋರಿದೆ. |
| 8 | ಶಿವಮೊಗ್ಗ | 483 | 459 | 24 | ಅನುಮೋದನೆ ಬಾಕಿ ಇರುವ 24 ಪ್ರಸ್ತಾವನೆಗಳ ದಾಖಲಾತಿಗಳು ಅಪೂರ್ಣವಾಗಿದ್ದು, ಪರಿಶೀಲಿಸಿ ಮರು ಸಲ್ಲಿಸಲು ಸೂಚಿಸಲಾಗಿದೆ |
| 9 | ತುಮಕೂರು | 903 | 644 | 259 | - |
| 10 | ಬೆಳಗಾವಿ | 598 | 227 | 371 | ತಾಲ್ಲೂಕು ಪಂಚಾಯತಿಯಿಂದ 384 ಸಿಬ್ಬಂದಿಗಳ ಪ್ರಸ್ತಾವನೆಯಲ್ಲಿ 227 ಸಿಬ್ಬಂದಿಗಳಿಗೆ ಅನುಮೋದನೆ ನೀಡಿದ್ದು, 157 ಸಿಬ್ಬಂದಿಗಳ ದಾಖಲಾತಿಗಳನ್ನು ಪರಿಶೀಲಿಸಿ ಅನುಮೋದನೆ ನೀಡಲು ಕ್ರಮವಹಿಸಲಾಗಿದೆ |
| 11 | ಬಾಗಲಕೋಟೆ | 110 | 108 | 2 | 2 ಸಿಬ್ಬಂದಿಗಳು ಅನುಮೋದನೆ ನೀಡುವ ಪೂರ್ವದಲ್ಲಿ ವಯೋ ನಿವೃತ್ತಿ ಹೊಂದಿರುವರು |
| 12 | ಧಾರವಾಡ | 176 | 151 | 25 | ದಿ:31.10.2017 ರ ಪೂರ್ವದಲ್ಲಿ ಗ್ರಾ.ಪಂ. ಗಳಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ವಾಟರ್‌ಮನ್, ಸಿಪಾಯಿ ಹಾಗೂ ಸ್ವಚ್ಛತಾಗಾರರು ಇರುವಂತಹ ಸಿಬ್ಬಂದಿಗಳಿಗೆ ಅನುಮೋದನೆ ನೀಡಿರುವುದಿಲ್ಲ. |
| 13 | ಗದಗ | 208 | 154 | 54 | ಬಾಕಿ ಉಳಿದ ಸಿಬ್ಬಂದಿಗಳ ದಾಖಲೆಗಳು ಸರಿಯಿರದ ಕಾರಣ ಹಾಗೂ ಹೆಚ್ಚುವರಿ ಸಿಬ್ಬಂದಿಗಳಿರುವ ಕಾರಣ ಬಾಕಿ ಉಳಿಸಿಕೊಳ್ಳಲಾಗಿದೆ |
| 14 | ಹಾವೇರಿ | 264 | 313 | 0 | ದಾಖಲೆಗಳ ಪರಿಶೀಲನೆಯಲ್ಲಿ ಕಂಡು ಬಂದಂತೆ ಗ್ರಾಮ ಪಂಚಾಯತಿ ನಡವಳಿಯ ಮೂಲಕ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ವೇಳೆ ಕೆಲ ಸಿಬ್ಬಂದಿಗಳ ವಿದ್ಯಾರ್ಹತೆಯು ಪೂರ್ಣಗೊಳ್ಳದೆ, ನಂತರದ ದಿನಗಳಲ್ಲಿ ಬಾಹ್ಯ ಮೂಲಕ ಪೂರ್ಣಗೊಂಡಿದ್ದು, ಅಂತಹ ಸಿಬ್ಬಂದಿಗಳನ್ನು ಕನಿಷ್ಠ ವಿದ್ಯಾರ್ಹತೆ ಹೊಂದಿಲ್ಲದೇ ಇರುವ ಸಿಬ್ಬಂದಿಗಳೆಂದು ಪರಿಗಣಿಸಿ ಅನುಮೋದನೆ ನೀಡಲಾಗಿದೆ |
| 15 | ಉತ್ತರ ಕನ್ನಡ | 190 | 190 | 0 | - |
| 16 | ವಿಜಯಪುರ | 218 | 61 | 157 | 5 ಸಿಬ್ಬಂದಿಗಳ ಪ್ರಸ್ತಾವನೆಗಳು ಪರಿಶೀಲನೆ ಹಂತದಲ್ಲಿರುತ್ತವೆ. 152 ಸಿಬ್ಬಂದಿಗಳ ದಾಖಲೆಗಳು ಲಭ್ಯವಾಗದ ಕಾರಣ ಅನುಮೋದನೆ ನೀಡುವುದನ್ನು ಕೈಬಿಡಲಾಗಿದೆ |
| 17 | ಬಳ್ಳಾರಿ | 119 | 84 | 35 | ಅರ್ಹರಿರುವ ಸಿಬ್ಬಂದಿಗಳ ಮಾಹಿತಿ ನೀಡಲು ಕಾರ್ಯನಿರ್ವಾಹಕ ಅಧಿಕಾರಿಗೆ ಪತ್ರ ಬರೆಯಲಾಗಿದೆ |
| 18 | ವಿಜಯನಗರ | 248 | 248 | 0 | - |
| 19 | ಬೀದರ್ | 168 | 141 | 27 | - |
| 20 | ಕಲಬುರಗಿ | 460 | 120 | 340 | - |
| [illegible] | [illegible] | 382 | 211 | 171 | |

| ಕ್ರ. ಸಂ. | ಜಿಲ್ಲೆಯ ಹೆಸರು | ಕನಿಷ್ಠ ವಿದ್ಯಾರ್ಹತೆ ಇಲ್ಲದೆ ಅನುಮೋದನೆಯಾಗದೇ ಇರುವ ಸಿಬ್ಬಂದಿಗಳ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿಲ್ಲದೇ ಅನುಮೋದನೆಯಾಗದೇ ಇರುವ ಸಿಬ್ಬಂದಿಗಳಿಗೆ ಅನುಮೋದನೆಯನ್ನು ನೀಡಿರುವ ಸಂಖ್ಯೆ | ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ | ಷರಾ |
|---|---|---|---|---|---|
| 22 | ತುಮಕೂರು | 586 | 611 | 0 | ಈ ಹಿಂದೆ ವಿದ್ಯಾರ್ಹತೆ ಇರುವುದಾಗಿ ತಿಳಿಸಿದ್ದ ಪ್ರಸ್ತಾವನೆಗಳನ್ನು ಪರಿಶೀಲಿಸಿದಾಗ ನಿಗದಿತ ವಿದ್ಯಾರ್ಹತೆ ಇಲ್ಲದಿರುವುದು ಕಂಡು ಬಂದಿರುವುದರಿಂದ 25 ಸಿಬ್ಬಂದಿಗಳಿಗೆ ಕನಿಷ್ಠ ವಿದ್ಯಾರ್ಹತೆ ಹೊಂದಿರುವುದಿಲ್ಲವೆಂದು ಅನುಮೋದನೆ ನೀಡಲಾಗಿದೆ. ಪ್ರಯುಕ್ತ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿಲ್ಲದೇ ಇರುವ ಸಿಬ್ಬಂದಿಗಳ ಸಂಖ್ಯೆ 611 ಆಗಿರುತ್ತದೆ. |
| 23 | ಯಾದಗಿರಿ | 205 | 0 | 205 | ತಾಲ್ಲೂಕು ಪಂಚಾಯತಿಗಳಿಂದ ಅಪೂರ್ಣ ಪ್ರಸ್ತಾವನೆಗಳು ಜಿ.ಪಂ.ಗೆ ಸಲ್ಲಿಕೆಯಾಗಿದ್ದು, ಅನುಮೋದನೆ ಆಯ್ಕೆ ಪ್ರಕ್ರಿಯೆಯಲ್ಲಿದೆ. |
| 24 | ಚಾಮರಾಜನಗರ | 285 | 0 | 285 | ಗ್ರಾಮ ಪಂಚಾಯತಿ ನೌಕರರ ದಾಖಲಾತಿಗಳ ಪರಿಶೀಲನಾ ಕಾರ್ಯವು ಪ್ರಕ್ರಿಯೆಯಲ್ಲಿದ್ದು, ಶೀಘ್ರವಾಗಿ ಅನುಮೋದನೆ ನೀಡಲಾಗುವುದು. |
| 25 | ಚಿಕ್ಕಮಗಳೂರು | 348 | 301 | 47 | ಅರ್ಹ ಅಭ್ಯರ್ಥಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದೆ |
| 26 | ದಕ್ಷಿಣ ಕನ್ನಡ | 20 | 13 | 7 | - |
| 27 | ಹಾಸನ | 244 | 244 | 0 | - |
| 28 | ಕೊಡಗು | 215 | 0 | 215 | ಅನುಮೋದನೆ ನೀಡುವ ಕುರಿತಂತೆ ಈಗಾಗಲೇ ಒಂದು ಸಮಿತಿಯನ್ನು ರಚಿಸಲಾಗಿದ್ದು, ದಾಖಲಾತಿಗಳು ಪರಿಶೀಲನಾ ಹಂತದಲ್ಲಿರುತ್ತದೆ. |
| 29 | ಮಂಡ್ಯ | 727 | 0 | 727 | ಗ್ರಾಮ ಪಂಚಾಯತಿ ನೌಕರರ ದಾಖಲಾತಿಗಳ ಪರಿಶೀಲನಾ ಕಾರ್ಯವು ಪ್ರಕ್ರಿಯೆಯಲ್ಲಿದ್ದು, ಶೀಘ್ರವಾಗಿ ಅನುಮೋದನೆ ನೀಡಲಾಗುವುದು. |
| 30 | ಮೈಸೂರು | 863 | 663 | 200 | ಅನುಮೋದನೆ ನೀಡಲು ಬಾಕಿ ಇರುತ್ತದೆ |
| 31 | ಉಡುಪಿ | 76 | 51 | 25 | ಬಾಕಿ ಇರುವ ಸಿಬ್ಬಂದಿ - 25 |
| ಒಟ್ಟು | | **11622** | **7250** | **4372** | |

ಅನುಬಂಧ-೩

**ನಮೂನೆ-2**

**ದಿನಾಂಕ:31-07-2017 ಕ್ಕಿಂತ ಹಿಂದೆ ನೇಮಕಗೊಂಡು ಎಲ್ಲಾ ದಾಖಲಾತಿಗಳು ಸರಿ ಇದ್ದು ಅನುಮೋದನೆಯಾಗದೇ ಇರುವ ಸಿಬ್ಬಂದಿಗಳಿಗೆ ಅನುಮೋದನೆಯನ್ನು ನೀಡಿರುವ ಸಿಬ್ಬಂದಿಗಳ ವಿವರ (20.11.2025 ಅಂತ್ಯಕ್ಕೆ)**

| ಕ್ರ. ಸಂ. | ಜಿಲ್ಲೆಯ ಹೆಸರು | ಎಲ್ಲಾ ದಾಖಲಾತಿಗಳು ಸರಿ ಇದ್ದು ಅನುಮೋದನೆಯಾಗದೇ ಇರುವ ಸಿಬ್ಬಂದಿಗಳ ಸಂಖ್ಯೆ | ಎಲ್ಲಾ ದಾಖಲಾತಿಗಳು ಸರಿ ಇದ್ದು ಅನುಮೋದನೆಯಾಗದೇ ಇರುವ ಸಿಬ್ಬಂದಿಗಳಿಗೆ ಅನುಮೋದನೆಯನ್ನು ನೀಡಿರುವ ಸಿಬ್ಬಂದಿಗಳ ಸಂಖ್ಯೆ | ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ | ಷರಾ |
|---|---|---|---|---|---|
| 1 | ಬೆಂಗಳೂರು ನಗರ | 337 | 310 | 27 | 27 ಸಿಬ್ಬಂದಿಗಳು ಮಂಜೂರಾಗದ ಹುದ್ದೆಗಳಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ |
| 2 | ಬೆಂಗಳೂರು ಗ್ರಾಮಾಂತರ | 43 | 2 | 41 | ಪ್ರಸ್ತಾವನೆಗಳು ಸಲ್ಲಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಕಚೇರಿಗೆ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ. |
| 3 | ಚಿಕ್ಕಬಳ್ಳಾಪುರ | 383 | 192 | 191 | |
| 4 | ಚಿತ್ರದುರ್ಗ | 274 | 138 | 136 | - |
| 5 | ದಾವಣಗೆರೆ | 215 | 62 | 153 | ದಾಖಲೆಗಳು ಸರಿಯಿಲ್ಲದ ಕಾರಣ ಪ್ರಸ್ತಾವನೆಗಳನ್ನು ಹಿಂದಿರುಗಿಸಲಾಗಿದೆ |
| 6 | ಕೋಲಾರ | 497 | 497 | 0 | - |
| 7 | ಬೆಂಗಳೂರು ದಕ್ಷಿಣ (ರಾಮನಗರ) | 699 | 0 | 699 | ಜಿ.ಪಂ. ಕಚೇರಿಯಿಂದ ಅನುಮೋದನೆಗೊಳ್ಳದ ಸೇವೆ ಸಲ್ಲಿಸುತ್ತಿರುವ ಎಲ್ಲಾ ದಾಖಲೆಗಳು ಸರಿ ಇರುವ **209** ಸಿಬ್ಬಂದಿಗಳು ಬಾಕಿ ಇರುವುದಾಗಿ ದಿ:1.7.2023 ರಲ್ಲಿ ಆಯುಕ್ತಾಲಯಕ್ಕೆ ಪತ್ರ ಸಲ್ಲಿಸಿದ್ದು, ಆಯುಕ್ತಾಲಯದ ದಿ:16.3.2024 ರ ಪತ್ರದಲ್ಲಿ ಎಲ್ಲಾ ದಾಖಲೆಗಳು ಸರಿ ಇರುವ **699** ಸಿಬ್ಬಂದಿಗಳಿಗೆ ಅನುಮೋದನೆ ನೀಡಲು ಆದೇಶಿಸಲಾಗಿರುತ್ತದೆ. ಎಲ್ಲಾ ದಾಖಲೆಗಳು ಸರಿ ಇರುವ 172 ಸಿಬ್ಬಂದಿಗಳಿಗೆ ಅನುಮೋದನೆಗಾಗಿ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, **119** ಸಿಬ್ಬಂದಿಗಳ ದಾಖಲಾತಿಗಳು ಸರಿ ಇದ್ದು, ಉಳಿದ ಸಿಬ್ಬಂದಿಗಳ ದಾಖಲಾತಿಗಳನ್ನು ಮರು ಸಲ್ಲಿಸಲು ತಿಳಿಸಿದೆ. ಆಯುಕ್ತಾಲಯದಿಂದ ನಿಗದಿಪಡಿಸಿರುವ ಸಂಖ್ಯೆಯನ್ನು ಸರಿಪಡಿಸಿ ಕೊಡಬೇಕಾಗಿ ಕೋರಿದೆ. |
| 8 | ಶಿವಮೊಗ್ಗ | 202 | 113 | 89 | ನಿವೃತ್ತಿ, ರಾಜಿನಾಮೆ, ಅಪೂರ್ಣ ದಾಖಲೆ, ಇತ್ಯಾದಿ |
| 9 | ತುಮಕೂರು | 440 | 90 | 350 | - |
| 10 | ಬೆಳಗಾವಿ | 207 | 0 | 207 | **87** ಸಿಬ್ಬಂದಿಗಳ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಕೂಡಲೇ ಅನುಮೋದನೆ ನೀಡಲು ಕ್ರಮವಹಿಸಲಾಗುವುದು |
| 11 | ಬಾಗಲಕೋಟೆ | 160 | 112 | 48 | ನಿಧನ ಹೊಂದಿರುವ **10** ಸಿಬ್ಬಂದಿಗಳ ಅವಲಂಬಿತರಿಗೆ ಅನುಕಂಪ ನೇಮಕಾತಿ ನೀಡಲಾಗಿರುತ್ತದೆ |
| 12 | ಧಾರವಾಡ | 308 | 226 | 82 | ದಿ:31.10.2017 ರ ಪೂರ್ವದಲ್ಲಿ, ಗ್ರಾ.ಪಂ. ಗಳಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ವಾಟರ್‌ಮನ್, ಸಿಪಾಯಿ ಹಾಗೂ ಸ್ವಚ್ಛತಾಗಾರರು ಇರುವಂತಹ ಸಿಬ್ಬಂದಿಗಳಿಗೆ ಅನುಮೋದನೆ ನೀಡಿರುವುದಿಲ್ಲ. |
| 13 | ಗದಗ | 303 | 150 | 153 | ಬಾಕಿ ಉಳಿದ ಸಿಬ್ಬಂದಿಗಳ ದಾಖಲೆಗಳು ಸರಿಯಿರದ ಕಾರಣ ಹಾಗೂ ಹೆಚ್ಚುವರಿ ಸಿಬ್ಬಂದಿಗಳಿರುವ ಕಾರಣ ಬಾಕಿ ಉಳಿಸಿಕೊಳ್ಳಲಾಗಿದೆ |
| 14 | ಹಾವೇರಿ | 657 | 328 | 329 | **6** ಸಿಬ್ಬಂದಿಗಳ ಮೇಲೆ ನ್ಯಾಯಾಲಯ/ ಇತರೆ ಪ್ರಕರಣಗಳು ದಾಖಲಾಗಿದ್ದು ಹಾಗೂ ದಾಖಲೆ ಸ್ಪಷ್ಟೀಕರಣ ನೀಡದಿರುವುದರಿಂದ ಅನುಮೋದನೆ ನೀಡಿರುವುದಿಲ್ಲ. |
| 15 | ಉತ್ತರ ಕನ್ನಡ | 129 | 114 | 15 | ಗ್ರಾಮ ಪಂಚಾಯತಿಗಳಲ್ಲಿ ಕರವಸೂಲಿಗಾರ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆ ಖಾಲಿ ಇಲ್ಲದಿರುವುದರಿಂದ ಅನುಮೋದನೆ ನೀಡಲು ಬಾಕಿ ಇರುತ್ತದೆ |
| 16 | ವಿಜಯಪುರ | 283 | 73 | 210 | **196** ಸಿಬ್ಬಂದಿಗಳ ದಾಖಲೆಗಳು ಸರಿ ಇಲ್ಲದ ಕಾರಣ & ವಯೋನಿವೃತ್ತಿ ಹೊಂದಿರುವುದರಿಂದ ಅನುಮೋದನೆ ನೀಡಿರುವುದಿಲ್ಲ |
| 17 | ಬಳ್ಳಾರಿ | 79 | 13 | 66 | **35** ಪ್ರಸ್ತಾವನೆಗಳಲ್ಲಿ **13** ಅರ್ಹ ಸಿಬ್ಬಂದಿಗಳಿಗೆ ಅನುಮೋದನೆ ನೀಡಿದ್ದು **20** ಸಿಬ್ಬಂದಿಗಳ ಅನುಮೋದನೆಗೆ ದಿ:09.12.2024 ರಲ್ಲಿ ಆಯುಕ್ತಾಲಯಕ್ಕೆ ಪತ್ರ ಬರೆಯಲಾಗಿದೆ |
| 18 | ವಿಜಯನಗರ | 86 | 86 | 0 | |
| 19 | ಬೀದರ್ | 184 | 176 | 8 | |
| 20 | ಕಲಬುರಗಿ | 331 | 17 | 314 | - |
| 21 | [illegible] | 94 | 14 | 80 | |
| 22 | ರಾಯಚೂರು | 274 | 235 | 39 | ಅನರ್ಹ ಪ್ರಸ್ತಾವನೆಗಳ ಸಂಖ್ಯೆ 39 |

| ಕ್ರ. ಸಂ. | ಜಿಲ್ಲೆಯ ಹೆಸರು | ಎಲ್ಲಾ ದಾಖಲಾತಿಗಳು ಸರಿ ಇದ್ದು ಅನುಮೋದನೆಯಾಗದೇ ಇರುವ ಸಿಬ್ಬಂದಿಗಳ ಸಂಖ್ಯೆ | ಎಲ್ಲಾ ದಾಖಲಾತಿಗಳು ಸರಿ ಇದ್ದು ಅನುಮೋದನೆಯಾಗದೇ ಇರುವ ಸಿಬ್ಬಂದಿಗಳಿಗೆ ಅನುಮೋದನೆಯನ್ನು ನೀಡಿರುವ ಸಿಬ್ಬಂದಿಗಳ ಸಂಖ್ಯೆ | ಅನುಮೋದನೆಗೆ ಬಾಕಿ ಇರುವ ಸಿಬ್ಬಂದಿಗಳ ಸಂಖ್ಯೆ | ಷರಾ |
|---|---|---|---|---|---|
| 23 | [illegible] | 148 | 0 | 148 | ತಾಲ್ಲೂಕು ಪಂಚಾಯತಿಗಳಿಂದ ಅಪೂರ್ಣ ಪ್ರಸ್ತಾವನೆಗಳು ಜಿ.ಪಂ.ಗೆ ಸಲ್ಲಿಕೆಯಾಗಿದ್ದು, ಅನುಮೋದನೆ ಪ್ರಕ್ರಿಯೆಯಲ್ಲಿದೆ. |
| 24 | ಚಾಮರಾಜನಗರ | 59 | 0 | 59 | ಗ್ರಾಮ ಪಂಚಾಯತಿ ನೌಕರರ ದಾಖಲಾತಿಗಳ ಪರಿಶೀಲನಾ ಕಾರ್ಯವು ಪ್ರಕ್ರಿಯೆಯಲ್ಲಿದ್ದು, ಶೀಘ್ರವಾಗಿ ಅನುಮೋದನ ನೀಡಲಾಗುವುದು. |
| 25 | ಚಿಕ್ಕಮಗಳೂರು | 184 | 158 | 26 | ಅರ್ಹ ಅಭ್ಯರ್ಥಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಎಲ್ಲಾ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದೆ |
| 26 | ದಕ್ಷಿಣ ಕನ್ನಡ | 39 | 37 | 2 | 62 ಪ್ರಸ್ತಾವನೆಗಳು ತಾಲ್ಲೂಕು ಪಂಚಾಯತಿಯಿಂದ ಸ್ವೀಕೃತವಾಗಿದ್ದು, 37 ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು, 25 ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ |
| 27 | ಹಾಸನ | 308 | 270 | 38 | ದಾಖಲಾತಿಗಳ ಪರಿಶೀಲನೆ ನಡೆಯುತ್ತಿದ್ದು, ಶೀಘ್ರವಾಗಿ ಅನುಮೋದನೆ ನೀಡಲಾಗುವುದು |
| 28 | ಕೊಡಗು | 21 | 0 | 21 | ಅನುಮೋದನೆ ನೀಡುವ ಕುರಿತಂತೆ ಈಗಾಗಲೇ ಒಂದು ಸಮಿತಿಯನ್ನು ರಚಿಸಲಾಗಿದ್ದು, ದಾಖಲಾತಿಗಳು ಪರಿಶೀಲನಾ ಹಂತದಲ್ಲಿರುತ್ತದೆ. |
| 29 | ಮಂಡ್ಯ | 216 | 0 | 216 | ಗ್ರಾಮ ಪಂಚಾಯತಿ ನೌಕರರ ದಾಖಲಾತಿಗಳ ಪರಿಶೀಲನಾ ಕಾರ್ಯವು ಪ್ರಕ್ರಿಯೆಯಲ್ಲಿದ್ದು, ಶೀಘ್ರವಾಗಿ ಅನುಮೋದನ ನೀಡಲಾಗುವುದು |
| 30 | ಮೈಸೂರು | 240 | 163 | 77 | ಬಿಲ್ ಕಲೆಕ್ಟರ್ ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಅನುಮೋದನೆ ನೀಡುವುದು ಬಾಕಿ ಇರುತ್ತದೆ |
| 31 | ಉಡುಪಿ | 115 | 1 | 114 | ದಿ:16.8.2024 ರಲ್ಲಿ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ ಅನುಮೋದನೆ ನೀಡುವ ಕುರಿತು ಹಾಗೂ ಪಂಪು ಚಾಲಕರ ಹೆಚ್ಚುವರಿ ಹುದ್ದೆ ಮಂಜೂರಾತಿಗೆ ಸ್ಪಷ್ಟೀಕರಣ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ |
| | ಒಟ್ಟು | 7515 | 3577 | 3938 | |